ಸುಮಂಗಲಾ ಮನೆ ಮನ ತುಂಬಿದಾಗ ಕೈ ತುಂಬಿದ ಸಂಬಳ ಹಲವು ಕಡೆ ಚೆಲ್ಲ ತೊಡಗಿತು. ಮಕ್ಕಳೆರಡು ಹುಟ್ಟಿ ಶಾಲೆಗೆ ಸೇರಿಸಿದಾಗ ಕೈಯಲ್ಲಿ ತೂತಾದಂತೆ ಸೋರಿ ಹೋಗುತ್ತಿತ್ತು. ಇನ್ನು ಸೈಟು, ಮನೆಯಂತೂ ಕನಸಿನಲ್ಲಿ ಬರತ್ತಿರಲಿಲ್ಲ.

'ಅಲ್ಲಾ ರೀ ನಿಮಗೆ ಕೆಲಸ ಸಿಕ್ಕೇ ಇಪ್ಪತ್ತು ವರುಷವಾಯಿತೇನೊ, ಮದುವೆಯಾಗಂತೂ ಹದಿನಾಲ್ಕು ವರುಷಗಳಾಗುತ್ತ ಬಂತು. ಇನ್ಯಾವಾಗ ರೀ ಜಾಗ ತೆಗೆದುಕೊಳ್ಳುವುದು, ಮನೆ ಕಟ್ಟುವುದು, ನಾ ಸತ್ತ ಮೇಲೆಯಾ? ನಾ ಸಾಯುವುದನ್ನೇ ಕಾಯುತ್ತಿದ್ದೀರಾ ಹೇಗೆ?' ಎನ್ನುವ ರಾಗವನ್ನು ಹೆಂಡತಿ ಹಾಡಿದಾಗಲೆಲ್ಲ ವಾಸು ಸಮಯ ನೋಡದೆ ವಾಕಿಂಗ್ ಹೊರಡುತ್ತಿದ್ದ. ಸ್ನೇಹಿತರ ಗೃಹಪ್ರವೇಶಗಳ ಊಟ ಮಾಡುತ್ತ ಒಂದು ಸಾಯಂಕಾಲ ವಾಸುವೂ ಪ್ರತಿಜ್ಞೆ ತೆಗೆದುಕೊಂಡ 'ಇನ್ನು ಮೂರು ವರ್ಷಗಳಲ್ಲಿ ನಾನೂ ಒಂದು ಮನೆಯ ಒಡೆಯನಾಗಿಯೇ ಸಿದ್ಧ'. ಅಂದಿನಿಂದ ಶುರುವಾಯಿತು ಜಾಗಗಳ ಬೇಟೆ, ಬ್ರಹತ್ ಬೆಂಗಳೂರು ನಗರದಲ್ಲಿ. ಕೆಲವು ಪ್ರತಿಷ್ಠಿತ ದಳ್ಳಾಳಿಗಳನ್ನು ಹಿಡಿದಾಯಿತು. 'ಒಂದು ಒಳ್ಳೆಯ ಜಾಗದಲ್ಲಿ ಪೂರ್ವಾಭಿಮುಖವಾಗಿರುವ ಜಾಗ ನೋಡಪ್ಪ, 30x40 ಸೈಟಾದರು ಸರಿ' ಎಂದಾಗ, ದಲ್ಲಾಳಿಗಳ ಮೊದಲ ಪ್ರಶ್ನೆ 'ಬಜೆಟ್ ಎಷ್ಟು?' ವಾಸು ಅಳೆದು ಸುರಿದು ಮನಸ್ಸಿನಲ್ಲಿ ಲೆಕ್ಕಾಚಾರ ಹಾಕುತ್ತ 'ಎಂಟು ಲಕ್ಷ' ಎಂದಾಗ ದಳ್ಳಾಳಿಗಳು ವಾಸುವಿನ ಮುಖ ನೋಡದೆ ಹೊರ ಹೋಗುವ ಬಾಗಿಲನ್ನು ತೋರಿಸಿದವರೇ ಹೆಚ್ಚು.

***

ಚಂದಮಾಮದ ವಿಕ್ರಮಾದಿತ್ಯನ ಕತೆಯಿಂದ ಪ್ರೇರಿತನಾದ ವಾಸು ಛಲ ಬಿಡದೆ ನಗರದ ಮೂಲೆ ಮೂಲೆಯಲ್ಲಿರುವ ದಳ್ಳಾಳಿಗಳನ್ನೂ ಬಿಡದೆ ಹಿಡಿದಾಗ ಬೆಂಗಳೂರು ನಗರದ ತುದಿಯಂಚಿನಲ್ಲಿದ್ದ 30x40 ಸೈಟು ಹಿಡಿಯುವಲ್ಲಿ ವಾಸುವಿಗೆ ವಿಜಯ ಪ್ರಾಪ್ತವಾಯಿತು. ಅದಕ್ಕಾಗಿ ಕೈ ಬಿಟ್ಟಿದ್ದು ಸುಮಾರು 12 ಲಕ್ಷ ರೂಪಾಯಿ. ಮರ ಗಿಡ, ಅಗಲವಾದ ರಸ್ತೆಗಳಿರುವ, ಆಗಲೇ ಕೆಲವು ಮನೆಗಳಿರುವ ಚೆಂದದ ಲೇ ಔಟಿನಲ್ಲಿರುವ ಸೈಟನ್ನು ನೋಡುತ್ತಿದ್ದಂತೆ ಸುಮಂಗಲಾಳ ಮುಖ ಊರಗಲವಾಯಿತು. ಆದರೂ 'ರೀ ಈ ಸೈಟು ದಕ್ಷಿಣಾಭಿಮುಖವಾಗಿದೆ, ನನಗೇಕೊ ಹೆದರಿಕೆ' ಸುಮಂಗಲಾ ಅಂದಾಗ ವಾಸು 'ಅದೆಲ್ಲ ಮೂಢನಂಬಿಕೆ, 12 ಲಕ್ಷಕ್ಕೆ ಇಷ್ಟು ಪ್ರತಿಷ್ಠಿತ ಜಾಗದಲ್ಲಿ ಜಾಗ ಸಿಗುವುದೇ ನಮ್ಮ ಪುಣ್ಯವೆಂದುಕೊ, ಇದೇ ಜಾಗ ಪೂರ್ವಾಭಿಮುಖವೊ, ಉತ್ತರಾಭಿಮುಖವೊ ಆಗಿದ್ದರೆ ಇದರ ಬೆಲೆ 18–20 ಲಕ್ಷ. ಯಾರು ಎಷ್ಟೇ ಹೇಳಿದರೂ ವಾಸುವಿನ ಅಮ್ಮನಿಗೆ ಮಾತ್ರ ದಕ್ಷಿಣಾಭಿಮುಖವಾಗಿರುವ ಸೈಟು ಸಲ್ಪವೂ ಇಷ್ಟವಾಗಲಿಲ್ಲ. ಸೈಟು ನೋಡಿ ಬಂದ 2 ವಾರದಲ್ಲೇ ರಿಜಿಸ್ಟ್ರೇಶನ್ ಮುಗಿಯಿತು. ಸೈಟು ತೋರಿಸಿದ ದಳ್ಳಾಳಿಗೆ ಶೇ.5 ದಕ್ಷಿಣೆಯೂ ಸಿಕ್ಕಿತು. ರಿಜಿಸ್ಟ್ರೇಶನ್ ಮುಗಿಸಿಕೊಂಡು ವಾಸು, ಸುಮಂಗಲಾ ಹೋಟೆಲಿನಲ್ಲಿ ಕಾಫಿ, ತಿಂಡಿ ತಿಂದು ಮನೆಗೆ ಬರುತ್ತಿರಬೇಕಾದರೆ ವಾಸುವಿನ ಬೈಕಿಗೆ ಹಿಂದಿನಿಂದ ಟೆಂಪೊ ಟ್ರಾವೆಲರ್ ಗುದ್ದಿದಾಗ ವಾಸು, ಸುಮಂಗಲರಿಬ್ಬರೂ ರಸ್ತೆಯ ಪಕ್ಕದ ಕೊಚ್ಚೆಯ ಮೇಲೆ ಬಿದ್ದರು. ಬೈಕ್ ಮಾತ್ರ ನಜ್ಜುಗುಜ್ಜಾಯಿತು. ಕೊಚ್ಚೆಯ ಮೇಲೆ ಬಿದ್ದದ್ದಕ್ಕೆ ಮೈ ಕೈ ತರಚಿದರೂ ಅಂತಹ ದೊಡ್ಡ ಪೆಟ್ಟೇನೂ ಆಗಲಿಲ್ಲ. ಬೈಕ್ ಮಾತ್ರ ಮತ್ತೆ ಉಪಯೋಗಿಸುವ ಸ್ಥಿತಿಯಲ್ಲಿರಲಿಲ್ಲ. ಸುಮಂಗಲಾ ಅಂತೂ 'ರೀ ಮೊದಲು ಆ ಜಾಗವನ್ನು ಕೊಟ್ಟು ಬಿಡಿ, ಜೀವ ಉಳಿದದ್ದೇ ಪುಣ್ಯ, ನಾನು ಅವತ್ತೇ ಹೇಳಿದ್ದೆ ನಮಗೆ ದಕ್ಷಿಣಾಭಿಮುಖವಾಗಿರುವ ವಾಸ್ತು ಸರಿಯಿಲ್ಲದ ಸೈಟ್ ಬೇಡವೆಂದು, ನಾನು ಹೇಳಿದ್ದನ್ನು ನೀವೆಲ್ಲಿ ಕೇಳುತ್ತೀರಿ?' ಎನ್ನುತ್ತ ಅಳತೊಡಗಿದಳು.

'ಅಲ್ಲವೇ ಆಕ್ಸಿಡೆಂಟ್ ಆದದ್ದು ಸರಿ, ಆದರೆ ನಮಗೇನೂ ಆಗಲಿಲ್ಲ ನೋಡು, ಬಹುಶಃ ಅದೇ ಸೈಟಿನ ಪುಣ್ಯದಿಂದ ಇರಬೇಕು ನೋಡು ನಾವಿನ್ನೂ ಬದುಕಿದ್ದೇವೆ' ಎನ್ನುತ್ತ ವಾಸು ಹೆಂಡತಿಗೆ ಸಮಜಾಯಿಸತೊಡಗಿದ.

'ವಾಸು ಜಾತಕ ನೋಡಿ ಜಾಗ ತೆಗೆದುಕೊ ಮಾರಾಯ ಅಂತ ಎಷ್ಟು ಸಲ ಹೇಳಿದರೂ ಕೇಳಲಿಲ್ಲ ನನ್ನ ಮಾತನ್ನ ನೀನು, ಇನ್ನು ಏನೆಲ್ಲ ಕಾದಿದೆಯೋ, ಕೆಟ್ಟದ್ದನ್ನ ಕಾಣುವ ಮೊದಲು ಆ ಪರಮಾತ್ಮ ನನ್ನ ಕರೆಸಿಕೊಂಡಿದ್ದರೆ ಸಾಕಿತ್ತು' ಎನ್ನುವ ಮಾತನ್ನು ಅರ್ಧ ಗಂಟೆಗೊಮ್ಮೆ ಅಮ್ಮ ಹೇಳತೊಡಗಿದಾಗ ವಾಸು ಮನೆಯಲ್ಲಿರುವುದನ್ನೇ ಕಡಿಮೆ ಮಾಡಿದ. ವಾಸುವಿಗೆ ಮನೆಯವರ ರಗಳೆ ತಡೆಯದೆ ಜಾಗ ಮಾರಾಟ ಮಾಡೋಣವೆಂದು ಅಲ್ಲಿ ಇಲ್ಲಿ ವಿಚಾರಿಸಿದಾಗ ಅನಿಷ್ಟದ ಜಾಗವೆಂದು ಕೊಳ್ಳುವವರೂ ಮುಂದೆ ಬರಲಿಲ್ಲ, ಬಂದರೂ ಕೊಂಡ ಅರ್ಧ ದುಡ್ಡಿಗೆ ಕೊಳ್ಳಲು ಮುಂದಾದರು.

ಇದೇ ಗೊಂದಲದಲ್ಲಿದ್ದ ವಾಸುವಿಗೆ ಸ್ನೇಹಿತರಿಂದ ಸಲಹೆ ಬಂತು. 'ಹೇಗೂ ಜಾಗ ತೆಗೆದುಕೊಂಡಿದ್ದಿ, ಮನೆ ಕಟ್ಟಿಯೇ ಬಿಡು, ಅದಕ್ಕೂ ಮೊದಲು ಜಾತಕ ತೋರಿಸಿ ಮುಂದುವರಿ' ಎಂದರು. ಸ್ನೇಹಿತರ ಸಲಹೆಯಂತೆ ಕಾಡುಮನೆಯ ಭಟ್ಟರಲ್ಲಿಗೆ ಗಂಡ, ಹೆಂಡತಿಯ ಜಾತಕ, ಜಾಗದ ಕಾಗದ ಪತ್ರ ಎಲ್ಲವನ್ನೂ ಹಿಡಿದುಕೊಂಡು ಹೊರಟ. ಜಾತಕ, ಜಾಗದ ಕಾಗದ ಪತ್ರವನ್ನೆಲ್ಲ ಕೂಲಂಕುಶವಾಗಿ ಪರಿಶೀಲಿಸಿದ ಭಟ್ಟರು 'ಈ ಜಾಗ ವಾಸ್ತು ಸರಿಯಿಲ್ಲದೆ ನಿಮ್ಮ ಜಾತಕಕ್ಕೆ ಹೊಂದಿಕೆಯಾಗದಿರುವುದು ನಿಜ, ಒಂದಲ್ಲ ಒಂದು ಸಂಕಷ್ಟಗಳು ಎದುರಾಗಬಹುದು, ರಕ್ತದ ಆಹುತಿಯೂ ಆಗಬಹುದು, ಅದಕ್ಕಾಗಿ ಮುಂದಿನ ಆರು ಶನಿವಾರ ಶನಿ ಪೂಜೆ ಮಾಡಿಸಿ, ಏಳನೆಯ ಶನಿವಾರ ಒಂದು ಶಾಂತಿ ಮಾಡಿಯೇ ಮನೆ ಕಟ್ಟಲು ಗುದ್ದಲಿ ಪೂಜೆ ಮಾಡಿ, ಇದಕ್ಕಾಗಿ ನೀವೇನೂ ಹೆಚ್ಚು ತೊಂದರೆ ತೆಗೆದುಕೊಳ್ಳುವುದು ಬೇಡ, ಪೂಜಾ ಸಾಮಗ್ರಿಗಳನ್ನು ನಾನೇ ಹೊಂದಿಸುವೆ. ನೀವು ಪ್ರತಿ ಶನಿವಾರ ಇಲ್ಲಿಗೇ ಬಂದರೆ ನಾನೇ ನಿಂತು ಪೂಜೆಗಳನ್ನೆಲ್ಲ ನಡೆಸಿಕೊಡುವೆ' ಎಂದಾಗ ಸುಮಂಗಲಾ ನೆಮ್ಮದಿಯ ನಿಟ್ಟುಸಿರು ಬಿಟ್ಟರೆ, ವಾಸುವಿಗೆ ಪೂಜೆಯೊಂದಿಗೆ ಬರುವ ಬಿಲ್ಲುಗಳ ಭಾರವನ್ನು ಎಣಿಸಿ ತಲೆ ಭಾರವಾಗತೊಡಗಿತು. ಹೆಂಡತಿ, ಅಮ್ಮ ಮತ್ತು ಸ್ನೇಹಿತರ ಒತ್ತಾಯದಂತೆ ಇಷ್ಟವಿಲ್ಲದಿದ್ದರೂ ಭಟ್ಟರು ಹೇಳಿದಂತೆ ಎಲ್ಲ ಪೂಜೆಗಳನ್ನು ನಡೆಸಿದ, ಇದರಿಂದ ಲಕ್ಷಗಟ್ಟಲೆ ಕೈ ಬಿಡದಿದ್ದರೂ 25–30 ಸಾವಿರವಂತೂ ಕೈ ಜಾರಿತು. ಇಷ್ಟರಲ್ಲಿ ವಾಸುವಿಗೆ ಆಫೀಸು ಮತ್ತು ಬ್ಯಾಂಕಿನಲ್ಲಿ ಸಾಲವೂ ಮಂಜೂರಾಯಿತು. ಮನೆಯ ಗುದ್ದಲಿ ಪೂಜೆಯೂ ಯಾವ ಅಪಶಕುನಗಳಿಲ್ಲದೇ ನಡೆಯಿತು.

ಸುಮಂಗಲಾಳ ಮೂರಂತಸ್ತಿನ ಮನೆಯ ಕನಸನ್ನು ನನಸಾಗಿಸದೆ ವಾಸುವಿನ ಬಜೆಟಿಗನುಗುಣವಾಗಿ ಎರಡಂತಸ್ತಿನ ಮನೆ ಕಟ್ಟುವುದೆಂದು ತೀರ್ಮಾನವಾಯಿತು. ಅದಕ್ಕಾಗಿ ಕಂಟ್ರಾಕ್ಟರನ್ನು ಗೊತ್ತುಪಡಿಸಲಾಯಿತು, ಪ್ಲಾನ್ ಸಿದ್ಧವಾಯಿತು. ಎಲ್ಲೂ ಎಡವಟ್ಟಾಗದೆ ಸ್ವಲ್ಪ ದಿನಗಳ ಮಟ್ಟಿಗೆ ಸೈಟಿನ ದಕ್ಷಿಣ ದಿಕ್ಕಿನ ವಿಚಾರ, ಜಾತಕ ದೋಷ ಎಲ್ಲವನ್ನೂ ಮರೆತರು. ವಾಸು ಎರಡು ದಿನಕ್ಕೊಮ್ಮೆ ಮನೆಯ ಕಟ್ಟಿಸುವಲ್ಲಿ ಹೋಗಿ ಮನೆಯ ಪ್ರಗತಿಯನ್ನು ನೋಡುತ್ತಿದ್ದ. ಆದರೆ ಮನೆಯ ಪಂಚಾಂಗ ಹಾಕಿ ಗೋಡೆಗಳು ಮೇಲೇಳುತ್ತಿದ್ದಂತೆ ವಾಸುವಿನ 10 ವರ್ಷದ ಕಿರಿಯ ಮಗ ಮಕ್ಕಳೊಡನೆ ಆಡುತ್ತ ಆಡುತ್ತ ಮೋರಿಗೆ ಬಿದ್ದಾಗ 'ಹರ್ಷ ಮೋರಿಗೆ ಬಿದ್ದ' ಮಕ್ಕಳೆಲ್ಲ ಕಿರುಚಾಡ ತೊಡಗಿದರು. ಪಕ್ಕದಲ್ಲೇ ಗಾಡಿಯಲ್ಲಿ ತರಕಾರಿ ಮಾರಿಕೊಂಡು ಹೋಗುತ್ತಿದ್ದವ ಕೂಡಲೇ ಮೋರಿಗೆ ಜಿಗಿದು ಹರ್ಷನನ್ನು ಮೇಲೆತ್ತಿದ. ಆಗಷ್ಟೇ ಆಫೀಸಿನಿಂದ ಮನೆಗೆ ಬಂದಿದ್ದ ವಾಸು ಮೊದಲು ಮಗನನ್ನು ಮೋರಿಯಿಂದ ಎತ್ತಿ ತಂದ ತರಕಾರಿ ಮಾರುವವನಿಗೆ 2000 ಸಾವಿರದ ನೋಟೊಂದನ್ನು ಕೊಟ್ಟು ಸಾಗಹಾಕಿ, ಹೆದರಿ ಕಾಲು ನೋವಿನಿಂದ ಅಳುತ್ತಿರುವ ಮಗನನ್ನು ಡಾಕ್ಟರಲ್ಲಿಗೆ ಕರೆದುಕೊಂಡು ಹೋದ. ಕೈ ಕಾಲೇನೂ ಮುರಿಯದಿದ್ದರೂ ಪೆಟ್ಟಾಗಿ ಊತ ಬಂದ ಕಾಲಿಗೆ ಬ್ಯಾಂಡೇಜ್ ಕಟ್ಟಿ ಬಿಟ್ಟರು. ಸ್ವಲ್ಪ ದಿನ ರೆಸ್ಟ್ ತೆಗೆದುಕೊಳ್ಳಲೂ ಹೇಳಿದರು.

'ನಾನು ಇನ್ನೇನು ನೋಡುವುದಿದೆಯೋ, ರಾಮ ಕೃಷ್ಣ ನನ್ನನ್ನು ಮೊದಲು ಕರೆದುಕೊ' ಎನ್ನುತ್ತ ವಾಸುವಿನ ತಾಯಿ ಮೂಲೆಯಲ್ಲಿ ಕೂತು ತನ್ನದೇ ರಾಗ ತೆಗೆದರು. 'ಆ ದರಿದ್ರ ಸೈಟಿನಿಂದಲೇ ಆದದ್ದು ಇದೆಲ್ಲ, ಹೇಳಿದ್ದೆ ಮೊದಲೇ,

## ಮನಸ್ಸು

ನನ್ನ ಮನಸ್ಸು
ಎಂದಿಗೂ ಆಗುವುದಿಲ್ಲ
ಖಾಲಿ
ಯಾಕೆಂದರೆ ನಾನು
ಕನಸುಗಳಿಗೆಂದಿಗೂ ಹಾಕುವುದಿಲ್ಲ
ಬೇಲಿ.

★ ಭಾಸ್ಕರ ಕೆ.

